# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 645/2023

**ಸಾಕ್ಷಿಯನ್ನು ದಿಃ 08.07.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಹೊನ್ನಯ್ಯ | ಸಿಡಬ್ಲ್ಯೂಃ 5 | ಪಿಡಬ್ಲ್ಯೂಃ 4 |
| ತಂದೆಯ ಹೆಸರು | ಸಿದ್ದಯ್ಯ | | |
| ವಯಸ್ಸು | 58 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಹುಣಸೂರು ಪಟ್ಟಣ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-2 ರಿಂದ 4 ಮತ್ತು 6 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಈ ಕೇಸಿನ ಮೃತ ಮಂಜುನಾಥ ಗೊತ್ತು. ಈ ಕೇಸಿನ ಬಗ್ಗೆ ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ನೀಡಿದ್ದೇನೆ. ದಿಃ 05.09.2023 ರ ಂದು ಸಂಜೆ 7.00 ಗಂಟೆಗೆ ನಾನು ಚಾಸಾ-4 ರವರೊಂದಿಗೆ ಬೈ ಪಾಸ್ ರಸ್ತೆಯ ಕೋರ್ಟ್ ಪಕ್ಕದಲ್ಲಿ ಟೀ ಕುಡಿಯುತ್ತಾ ಕುಳಿತಿದ್ದೆವು. ಪಿರಿಯಾಪಟ್ಟಣ ಕಡೆಯಿಂದ ಒಂದು ಟ್ರ್ಯಾಕ್ಟರ್ ಟ್ರೇಲರ್ ನೊಂದಿಗೆ ಮೈಸೂರು ಕಡೆಗೆ ಹೋಗುತ್ತಿತ್ತು. ಆ ಸಮಯದಲ್ಲಿ ಮೈಸೂರು ಕಡೆಯಿಂದ ಹುಣಸೂರ ಕಡೆಗೆ ಮೃತ ಮಂಜುನಾಥರವರು ಬುಲೆಟ್ ಬೈಕಿನಲ್ಲಿ ಚಾಸಾ-3 ರವರನ್ನು ಹಿಂಬಂದಿ ಕೂರಿಸಿಕೊಂಡು ಬರುತ್ತಿದ್ದರು. ಟ್ರ್ಯಾಕ್ಟರ್ ಹಿಂಭಾಗದಿಂದ ಒಂದು ಪೋಲೋ ಕಾರು ಸಂಃ ಕೆ.ಎ 09-7212 ಬರುತ್ತಿತ್ತು. ಸದರಿ ಕಾರು ಅತೀವೇಗವಾಗಿ ಬರುತ್ತಿತ್ತು. ಸದರಿ ಕಾರು ವೇಗವಾಗಿ ಬಂದು ಎದುರುಗಡೆಯಿಂದ ಬರುತ್ತಿದ್ದ ಮಂಜುನಾಥರವರ ಬೈಕಿಗೆ ಡಿಕ್ಕಿಯಾಯಿತು. ಅದರ ಪರಿಣಾಮ ಮಂಜುನಾಥ ಮತ್ತು ಚಾಸಾ-3 ರವರು ಬೈಕಿನಿಂದ ಬಿದ್ದರು. ನಾನು ಮತ್ತು ಚಾಸಾ-4 ರವರು ತಕ್ಷಣ ಓಡಿ ಹೋದೆವು. ನಾವು ನೋಡಿದಾಗ ಮಂಜುನಾಥ ಮತ್ತು ಚಾಸಾ-3 ರವರ ತಲೆಗೆ ಏಟಾಗಿತ್ತು. ಚಾಸಾ-4 ರವರು ಮಂಜುನಾಥರವರ ಚಿಕ್ಕಪ್ಪ ಚಾಸಾ-2 ರವರಿಗೆ ಕರೆ ಮಾಡಿದರು. ತಕ್ಷಣ ಚಾಸಾ-2 ರವರು ಸ್ಥಳಕ್ಕೆ ಬಂದರು. ಚಾಸಾ-2 ರವರು ಮಂಜುನಾಥರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ

ಕರೆದುಕೊಂಡು ಹೋದರು ಅಲ್ಲಿ ಆಗುವುದಿಲ್ಲ ಎಂದ ಕಾರಣ ಮೈಸೂರಿನ ಕೆವಿಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ದಿಃ 07.09.2023 ರಂದು ರಾತ್ರಿ 12.30 ಕ್ಕೆ ಮಂಜುನಾಥರವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟರು. ಆ ದಿನ ಕಾರನ್ನು ಚಲಾಯಿಸುತ್ತಿದ್ದ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಆ ದಿನ ಸದರಿ ಕಾರನ್ನು ಆರೋಪಿಯೇ ಚಲಾಯಿಸುತ್ತಿದ್ದರು ಎಂದು ನುಡಿಯುತ್ತಾರೆ. ಆ ದಿನ ಆರೋಪಿ ಚಲಾಯಿಸುತ್ತಿದ್ದ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-2 ರಿಂದ 5 ರ ಭಾವಚಿತ್ರಗಳಲ್ಲಿ ಕಾರನ್ನು ನೋಡಿ ಗುರುತಿಸುತ್ತಾರೆ. ಮಂಜುನಾಥರವರು ಚಲಾಯಿಸುತ್ತಿದ್ದ ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-6 ರಿಂದ 9 ರ ಬಾವಚಿತ್ರಗಳಲ್ಲಿ ಬೈಕನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. SNK ಪರ ಕು. ASM ವಕೀಲರಿಂದಃ**

ಆ ದಿನ ಕೋರ್ಟ್ ಪಕ್ಕಲ್ಲಿರುವ ತೋಟಗಾರಿಕ ಇಲಾಖೆಯ ಕಚೇರಿ ಮುಂಭಾಗದಲ್ಲಿರುವ ಕ್ಯಾಂಟಿನ್ ನಲ್ಲಿ ಟೀ ಕುಡಿಯುತ್ತಿದ್ದೆವು. ನಾವು ಉತ್ತರ ದಿಕ್ಕಿಗೆ ಮುಖ ಮಾಡಿ ಕುಳಿತಿದ್ದೆವು . ನಾನು 8ನೇ ತರಗತಿ ಓದಿದ್ದೇನೆ. *(ಸಾಕ್ಷಿಯ ಎಡಗೈಯನ್ನು ವಕೀಲರು ತೆರೆಯಿಸಿ ನೋಡಲಾಗಿ ಸಾಕ್ಷಿ ಅಪಘಾತವಾದ ದಿನಾಂಕ, ವಾಹನದ ಸಂಖ್ಯೆ ಮರಣ ಹೊಂದಿದ ದಿನಾಂಕ, ಕಾರಿನ ಹೆಸರು ಬರೆದುಕೊಂಡು ಬಂದಿದ್ದಾರೆ.)* ನಾನು ಯಾವುದೇ ಅಪಘಾತತವನ್ನು ನೋಡದೇ ಇದ್ದರುಾ ಸಹ ಪೋಲಿಸರು ಹೇಳಿಕೊಟ್ಟಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.